

# ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು-560 054

## 'ನಾಡೋಜ ಎಚ್. ಎಲ್. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ' ಪ್ರದಾನ ಸಮಾರಂಭ

ದಿನಾಂಕ : 26.06.2018ರ ಮಂಗಳವಾರ ಸಂಜೆ 5.00ಕ್ಕೆ ಸ್ಥಳ : ರವೀಂದ್ರ ಕಲಾಕ್ಷೇತ್ರ, ಬೆಂಗಳೂರು

**ದಿವ್ಯ ಸಾನಿಧ್ಯ ಹಾಗೂ ಉದ್ಘಾಟನೆ**

**ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ|| ನಿರ್ಮಲಾನಂದನಾಥ ಮಹಾಸ್ವಾಮಿಗಳು**

ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಶ್ರೀ ಕ್ಷೇತ್ರ ಆದಿಚುಂಚನಗಿರಿ

**ಪ್ರಶಸ್ತಿ ಪುರಸ್ಕೃತರು**

**ನಾಡೋಜ ಶ್ರೀ ಬೆಳಗಲ್ಲು ವೀರಣ್ಣ**

ತೊಗಲು ಗೊಂಬೆ ಯಕ್ಷಗಾನ ಕಲಾವಿದರು

ಪ್ರಶಸ್ತಿ ಪ್ರದಾನ

**ಡಾ. ಜಯಮಾಲ ರಾಮಚಂದ್ರ**

ಮಾನ್ಯ ಸಚಿವರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಸರ್ಕಾರ

ಮುಖ್ಯ ಅತಿಥಿಗಳು

**ಶ್ರೀ ಎ. ಜೆ. ಸದಾಶಿವ**

ಗೌರವಾನ್ವಿತ ನಿವೃತ್ತ ನ್ಯಾಯಮೂರ್ತಿ, ಕರ್ನಾಟಕ ಉಚ್ಚ ನ್ಯಾಯಾಲಯ

ಅಧ್ಯಕ್ಷತೆ

**ಶ್ರೀ ಟಿ. ತಿಮ್ಮೇಗೌಡ** ಐ.ಎ.ಎಸ್ (ನಿ)

ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತು

ಸ್ವಾಗತ ಮತ್ತು ಪ್ರಾಸ್ತಾವಿಕ

**ಶ್ರೀ ಆದಿತ್ಯ ನಂಜರಾಜ್**

ಮ್ಯಾನೇಜಿಂಗ್ ಟ್ರಸ್ಟಿ, ಕರ್ನಾಟಕ ಜಾನಪದ ಪರಿಷತ್ತು

ವಂದನಾರ್ಪಣೆ

**ಡಾ. ರಾಜೇಗೌಡ ಹೊಸಹಳ್ಳಿ**

ಗೌರವ ಕಾರ್ಯದರ್ಶಿಗಳು, ಕರ್ನಾಟಕ ಜಾನಪದ ಪರಿಷತ್ತು

ವಿಶೇಷ ಕಾರ್ಯಕ್ರಮ ಸಮಯ 6.30ಕ್ಕೆ

ಪ್ರಖ್ಯಾತ ಯಕ್ಷಗಾನ ಹಾಸ್ಯ ಕಲಾವಿದರಾದ

**ಶ್ರೀ ಶ್ರೀಧರ ಹೆಗಡೆ ಚಪ್ಪರಮನೆ ಮತ್ತು ಸಂಗಡಿಗರಿಂದ**

ಯಕ್ಷಗಾನ ಪ್ರಸಂಗ-ಮಂಥರೆಯ ದುರ್ಮಂತ್ರ

*ಸರ್ವರಿಗೂ ಸುಸ್ವಾಗತ*

ಪದಾಧಿಕಾರಿಗಳು, ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗ

# ನಾಡೋಜ ಎಚ್. ಎಲ್. ನಾಗೇಗೌಡ
# 4ನೇ ವರ್ಷದ ರಾಷ್ಟ್ರೀಯ ಪ್ರಶಸ್ತಿ ಸಮಾರಂಭ

## ನಾಡೋಜ ಶ್ರೀ ಬೆಳಗಲ್ಲು ವೀರಣ್ಣ ಕಿರುಪರಿಚಯ



ನಾಡಿನ ಪ್ರಸಿದ್ಧ ಸಾಹಿತಿ, ಪ್ರವಾಸಿ ಇಂಡಿಯಾ ಮಾಲಿಕೆಯ ಕರ್ತೃ, ಜಾನಪದಲೋಕ ನಿರ್ಮಾತೃ ಎಚ್.ಎಲ್. ನಾಗೇಗೌಡರ ನೆನಪಿನಲ್ಲಿ ಅವರು ಕಟ್ಟಿ ಬೆಳೆಸಿದ 'ಕರ್ನಾಟಕ ಜಾನಪದ ಪರಿಷತ್ತು' ಸಂಸ್ಥೆ ಪ್ರತಿ ವರ್ಷ ರಾಷ್ಟ್ರಮಟ್ಟದ ಜನಪದ ಕಲಾವಿದರನ್ನು ಗುರುತಿಸಿ ಒಂದು ಲಕ್ಷ ರೂ.ಗಳನ್ನೊಳಗೊಂಡ ಪ್ರಶಸ್ತಿ ನೀಡುತ್ತದೆ. 2018ರ 'ನಾಡೋಜ ಎಚ್.ಎಲ್. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ'ಯನ್ನು ಈ ಬಾರಿ ತೊಗಲುಗೊಂಬೆ ಯಕ್ಷಗಾನ ಕಲಾವಿದರಾದ ನಾಡೋಜ ಶ್ರೀ ಬೆಳಗಲ್ಲು ವೀರಣ್ಣ ಅವರಿಗೆ ನೀಡಲಾಗುತ್ತಿದೆ.

ಅತ್ಯಂತ ಸುಂದರ, ಕಲಾತ್ಮಕ ಕುಸುರಿಯ ಚರ್ಮದ ಗೊಂಬೆಗಳ ಬಳಸಿ ಆಡುವ ಪ್ರದರ್ಶನ "ತೊಗಲುಗೊಂಬೆ ಆಟ" ಈ ಪರಂಪರೆಗೆ ಸೇರಿದ ಮನೆತನದವರು ಶ್ರೀ ಬೆಳಗಲ್ಲು ವೀರಣ್ಣ ಅವರು. ಬಳ್ಳಾರಿಯಿಂದ ಇವರು ಮೊದಮೊದಲು ಈ ಆಟಕ್ಕೆ ಕಂಪನಿ ರಂಗಭೂಮಿಯ ಆಕರ್ಷಣೆಗೆ ಒಳಗಾಗಿ ರಂಗಭಾಷೆ, ರಂಗ ಸಂಗೀತಗಳ ಅರಗಿಸಿಕೊಂಡು ತಮ್ಮೊಳಗೆ ಹುರಿಗೊಳಿಸಿ ಹದಗೊಂಡವರು. ಕಂಪನಿ ರಂಗಭೂಮಿ ಕುಗ್ಗಿದಾಗ ಹೊಸದಾರಿ ತಾಪಿಸಿ ಎಚ್ಚತ್ತುಕೊಂಡು ತಮ್ಮ ಮನೆತನದ ಕಾಯಕವಾದ ತೊಗಲುಗೊಂಬೆ ಆಟಕ್ಕೆ ಮರಹೊರಳಿ ಅದರ ವಸ್ತು ಕಥನ, ಗೊಂಬೆಗಳ ಸಂರಚನೆ ಪ್ರದರ್ಶನಗಳಲ್ಲಿ ನಾವಿನ್ಯತೆ ಏರ್ಪಡಲು ಪರಿಶ್ರಮಿಸಿ ಹಿಡಿತ ಕಂಡುಕೊಂಡವರು. 'ಸ್ವಾತಂತ್ರ್ಯ ಸಂಗ್ರಾಮ", "ಬಾಪು", "ಪ್ರವಾದಿ ಬಸವೇಶ್ವರ", "ಸೀತಾಪಹರಣ" ಒಳಗೊಂಡ "ಕನಕದಾಸ"ರವರೆಗೂ ಮುನ್ನಡೆಸಿದ್ದಾರೆ. ಜೊತೆಗೆ ಪರಂಪರೆಯ ಆಟದ ಪ್ರದರ್ಶನವನ್ನು ಕಾಯ್ದುಕೊಂಡಿದ್ದಾರೆ. ಶ್ರೀ ವೀರಣ್ಣ ಅವರ ನೇತೃತ್ವದ ತಂಡ ಈಗಾಗಲೇ ಸ್ವಿಟ್ಜರ್‌ಲ್ಯಾಂಡ್, ಜರ್ಮನಿ ಹಾಗೂ ಥಾಯ್‌ಲ್ಯಾಂಡ್ ಪ್ರವಾಸ ಕೈಗೊಂಡು ಭಾರತೀಯ ಪರಂಪರೆ ಬಿಂಬಿಸುವ ಗೊಂಬೆಯಾಟವನ್ನು ಯಶಸ್ವಿ ಪ್ರದರ್ಶನ ನೀಡಿ ಗಮನ ಸೆಳೆದಿದ್ದಾರೆ.

84ರ ಈ ಹಿರಿಯರು ಅನುಭವಿಗಳು ಆದ ಇವರಿಗೆ ನಾಡೋಜ ಪುರಸ್ಕಾರ, ರಾಜ್ಯೋತ್ಸವ ಪ್ರಶಸ್ತಿಗಳಲ್ಲದೆ ಜಾನಪದ ಕ್ಷೇತ್ರದ ಸಾಧಕರಿಗೆ ನೀಡುವ ಕರ್ನಾಟಕ ಸರ್ಕಾರದ ಅತ್ಯುನ್ನತ್ತ ಪ್ರಶಸ್ತಿ "ಜಾನಪದಶ್ರೀ", ಕೇಂದ್ರ ಸರ್ಕಾರ ನೀಡುವ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಜಾನಪದ ಲೋಕದ "ದೊಡ್ಡಮನೆ ಪ್ರಶಸ್ತಿ", ಗುಜರಾತಿನಿಂದ 'ಕಮಲಾದೇವಿ ಚಟ್ಟೋಪಾದ್ಯಯ'ಪ್ರಶಸ್ತಿ, 'ಗೋಮತಿ ಪ್ರಶಸ್ತಿ', ತಮಿಳುನಾಡಿನಿಂದ "ಕಲೈ ಭೂಷಣ" ಪ್ರಶಸ್ತಿಯು ಸಂದಿದೆ. ಕಂಪನಿ ರಂಗಭೂಮಿಯ ಈ ಸಾಧಕರದು ತೊಗಲುಗೊಂಬೆ ಆಟದಲ್ಲಿ ಅನನ್ಯದ ಅನುಭವ. ಸೊಗಸಾದ ಹಾಡುಗಾರರು ಆದ ಈ ಮಹನೀಯರನ್ನು ಗೌರವಿಸುವ ಕಾರ್ಯ ನಮ್ಮದಾಗಿದೆ.

